## <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## ಸಿ.ಸಿ. ಸಂಖ್ಯೆಃ 620/14

**ಸಾಕ್ಷಿಯನ್ನು ದಿಃ 13.06.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಮ್ಯಾ | ಸಿ.ಡಬ್ಲ್ಯೂಃ **30** | ಪಿ.ಡಬ್ಲ್ಯೂಃ **16** |
| ತಂದೆಯ ಹೆಸರು | ಆದಿತ್ಯ ಹೆಚ್ ಜೆ | | |
| ವಯಸ್ಸು | 36 ವರ್ಷ | | |
| ಕೆಲಸ | ಗುಮಾಸ್ತರು, ಕರ್ನಾಟಕ ಬ್ಯಾಂಕ್ | | |
| ವಾಸಸ್ಥಳ | ಮೈಸೂರು | | |

## <u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ನಾನು ಹುಣಸೂರಿನ ಕರ್ನಾಟಕ ಬ್ಯಾಂಕ್ನಲ್ಲಿ ಗುಮಾಸ್ತಳಾಗಿ ದಿಃ 04.02.2009 ರಿಂದ 31.03.2012 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ಡಿಸೆಂಬರ್–**2020** ರಲ್ಲಿ ನಾನು ಕ್ಯಾಷಿಯರ್ ಆಗಿದ್ದೆ. ಆಗ ಒಂದು ಒಂದು ವಿತ್ ಡ್ರಾ ಸ್ಲಿಪ್ ಬಂದಿದ್ದು ಅದರ ಮೌಲ್ಯ ರೂ. **55,000/–** ಆಗಿದ್ದು ಅದರಲಿಲ ರಾಜಮ್ಮ ಅವರ ಸಹಿ ಇತ್ತು. ನಾನು ಸದರಿ ರಾಜಮ್ಮ ಅವರಿಗೆ ಪೇಮೆಂಟ್ ಮಾಡಲು ಕರೆದಿದ್ದೆ. ಆಗ ಅವರು ಅಲ್ಲಿಗೆ ಬರಲಿಲ್ಲ. ಆಗ ಮ್ಯಾನೇಜರ್ ಆರೋಪಿ ಸದರಿ ಹಣವನ್ನು ಕ್ಯಾಷ್ ಕ್ಯಾಬೀನ್ ಬಳಿ ಬಂದು ಆ ಹಣ ನನಗೆ ಕೊಡಿ ರಾಜಮ್ಮ ನನ್ನ ಕ್ಯಾಬೀನ್ ಬಳಿ ವೈಟ್ ಮಾಡುತ್ತಿದ್ದಾರೆ ಎಂದು ತಿಳಿಸಿ ಹಣ ತೆಗೆದುಜಕೊಂಡು ಹೋದರು. ನಂತರ **2010** ಆಗಸ್ಟ್ ನಲ್ಲಿ ಬೆಳಿಗ್ಗೆ **10.–10.15** ರ ಸಮಯ ನಾನು ಲಾಗಿನ್ ಆಗುತ್ತಿದ್ದಾಗೆ ಮ್ಯಾನೇಜರ್ ಆದ ಆರೋಪಿ ಬಂದು ಒಂದು ಡೇಬಿಟ್ಟ್ರಾನ್ಸ್ ಫರ್ ಸ್ಲಿಪ್ ಜೊತೆಗೆ ಒಂದು ಆರ್ ಟಿ ಜಿ ಎಸ್ ನೀಡಿದ್ದು, ಕಸ್ಟಮರ್ ನಿಂದ ಡಿ ವೈ ಉಪ್ಪಾರ ಎಂಬುವವರ ಅಕೌಂಟ್ ನಿಂದ ಸದರಿ ಅವರ ಹೆಸರು ಅಕೌಂಟ್ ನಂಬರ್ ಸ್ಲಿಪ್ ನಲ್ಲಿ ಬರೆದಿದ್ದು, ಚೆಕ್ ನಂಬರ್ ಕೂಡ ನಮೂದು ಮಾಡಿದ್ದು ಚೆಕ್ ಎಲ್ಲಿ ಎಂದು ಕೇಳಿದಾಗ ಅದನ್ನು ನಾನು ನಂತರ ಕಲೆಕ್ಟ್ ಮಾಡ್ತುತ್ತೇನೆ ಎಂದು ಹೇಳಿ ಈ ಆರ್ ಟಪಿ ಜಿ.ಎಸ್. ಎಂಟ್ರಿ ಮಾಡಲು ನನಗೆ ಕೊಟ್ಟರು. ಅದನ್ನು ನಾನು ಎಂಟ್ರಿ ಮಾಡಿ ಇನ್ನೊಬ್ಬ ಆಫೀಸರ್ ಮಧುಸೂದನ್ ಬಳಿ ನೀಡಿರುತತೇನೆ. ಎಂಟ್ರಿ ಮಾಡಿದ ನಂತರ ಚೆಕ್ ಯಾವಾಗ ಬರುತ್ತದೆ ಎಂದು ಮ್ಯಾನೇಜರ್ ಆದ ಆರೋಪಿ ಬಳಿ ಕೇಳಿದಾಗ ಸದರಿಯವರು ನಾನ ಅದನ್ನು ನಾನು ಕಲೆಕ್ಟ್ ಮಾಡುತ್ತೇನೆ. ನೀವು ಯೋಾಚಿಸಬೇಡಿ ಎಂದು ಹೇಳಿದರು. ಆ ಸಮಯ ನನಗೆ ಏನು ಗೊತ್ತಿರಲಿಲ್ಲ. ನಂತರ ಮ್ಯಾನೇಜರ್ ಆದ ಆರೋಪಿಯವರು ಬೇರೆ ಬೇರೆ ಅಕೌಂಟ್ ಗಳಿಂದ ಶ್ರದ್ಧಾ ಎಂಟರ್ ಪ್ರೈಸಸ್

ಅಕೌಂಟ್ ಗೆ ಹಾಕಿಸಿರುವುದು ತಿಳಿದುಬಂದಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಬೇರೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

2. ಪ್ರಧಾನ ಕಚೇರಿಯ ಚೀಫ್ ಮ್ಯಾನೇಜರ್ ಶ್ರೀ ಪ್ರಫುಲ್ಲಾ ಚಂದ್ರ ಮತ್ತು ಶ್ರೀನಿವಾಸ ಭಟ್ ಮಂಗಳೂರುರವರು ನಮ್ಮ ಶಾಖೆಯಲ್ಲಿ ದಿಃ06.03.2012 ರಿಂದ 10.03.2012 ರವರೆಗೆ ತನಿಖೆ ಮಾಡಿದಾಗ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ಹಂಪಾಪುರ ಹೋಬಳಿ ಕ್ಯಾತನಹಳ್ಳಿ ಗ್ರಾಮದ ರಾಜಮ್ಮ ಕೊಂ ಜಗನ್ನಾಧ, ಅವರ ಹುಣಸೂರು ಶಾಖೆಯಲ್ಲಿ ದಿನಾಂಕ 21.05.2010 ರಂದು ಖಾತೆ ತೆರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಖಾತೆ ಸಂಖ್ಯೆ 764262 ಎಂದರೆ ಗೊತ್ತಿಲ್ಲ. ಸದರಿ ರಾಜಮ್ಮರವರು ಎರಡು ವಿವಿಧ ಸಾಲ ಸೌಲಭ್ಯಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಶ್ರೀಮತಿ ರಾಜಮ್ಮ ಕೊಂ ಜಗನ್ನಾಥರವರು ಕಬ್ಬು ಬೆಳೆಗಾರರಾಗಿದ್ದು ತಾವು ಬೆಳೆದ ಕಬ್ಬನ್ನು ಬನ್ನಾರಿ ಎಮ್ಮನ ಶುಗರ ಕಾರ್ಖಾನೆಗೆ ಸರಬರಾಜು ಮಾಡುತ್ತಿದ್ದುನಮ್ಮ ಬ್ಯಾಂಕಿನ ಮ್ಯಾನೇಜರ್ ಆದ ಆರೋಪಿಯು ದಿನಾಂಕ 07.07.2010 ರಂದು ಸಾದರಿ ಕಾರ್ಖಾನೆಯ ಆಡಳಿತ ಮಂಡಳಿಗೆ ಪತ್ರ ಬರೆದು ಕಾರ್ಖಾನೆಗೆ ಸರಬರಾಜು ಮಾಡಿದ ಹಣವನ್ನು ತಮ್ಮ ಬ್ಯಾಂಕಿಗೆ ನೇರವಾಗಿ ಕಳುಹಿಸುವಂತೆ ಮನವಿ ಮಾಡಿರುತಾತರೆ ಎಂದರೆ ಗೊತ್ತಿಲ್ಲ. ದಿನಾಂಕ 07.12.2010 ರಂದು ಚೆಕ್ ಸಂಖ್ಯೆ 083539 ರೂ.57,783/-ನ್ನು ತಮ್ಮ ಉಳಿತಾಯ ಖಾತೆಗೆ ಸಂದಾಯವಾಗುವಂತೆ ಸೂಚಿಸಿ ಚೆಕ್ಕನ್ನು ಆರೋಪಿಯವರಿಗೆ ರಾಜಮ್ಮ ಹಸ್ತಾಂತರ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ ಹಾಗೂ ರಾಜಮ್ಮರವರು ಖ್ವಾತೆಯಿಂದ ಹಣ ತೆಗೆಯುವುದಕ್ಕೆ ಹಾಗೂ ಜಮಾ ಮಾಡುವುದಕ್ಕೆ ಬೇಕಾದ ಚಲನಗಳಿಗೆ ಅರೋಪಿಯ ಸಹಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಆರೋಪಿಯ ಹಣ ತೆಗೆಯುವ ಚೆಲನನ್ನು ಭರ್ತಿ ಮಾಡಿ ಚಾಸಾ-28 ರವರ ಚೆಕನ್ನು ದೃಢೀಕರಿಸಲು ನೀಡಿದ್ದು ನಂತರ ರಮ್ಯಾರವರು ಕ್ಯಾಶಿಯರ ರವರಿಂದ ದಿನಾಂಕ 23.12.2010 ರಂದು ರೂ.55,000/-ಗಳನ್ನು ಹಾಗೂ ದಿನಾಂಕ 18.01.2011 ರಂದು

ರೂ2,250/-ಗಳನ್ನು ನಗದೀಕರಿಸಿಕೊಂಡು ಹಣವನ್ನು ದುರಪಯೋಗಪಡಿಸಿ ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಇದೇ ರೀತಿ ನಮ್ಮ ಬ್ಯಾಂಕಿನ ಹುಣಸೂರಿನ ಗ್ರಾಹಕರಾದ ಹೆಚ್.ಎಸ್.ವರದರಾಜು ರವರು ಎಸ್.ಬಿ.ಖಾತೆ ಸಂಖ್ಯೆ 760364 ನ್ನು ಹೊಂದಿದ್ದು ಅವರು ಬ್ಯಾಂಕನಿಂದ ವಿವಿಧ ಉದ್ದೇಶಗಳಿಗಾಗಿ ರೂ.11,25,000/-ಗಳನ್ನು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ದಿನಾಂಕ 03.02.2011 ರಂದು ಆರೋಪಿರವರಿಗೆ ಸಾಲದ ಖಾತೆಗೆ ಜಮಾ ಮಾಡುವಂತೆ ರೂ.3,00,000/-ಗಳನ್ನು ನೀಡಿದ್ದು ನಂತರ ದಿನಾಂಕ 31.05.2011 ರಂದು ರೂ.2,64,000/-ಗಳನ್ನು ಸಾಲದ ವಿವಿಧ ಖಾತೆಗೆ ವರ್ಗಾಯಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಈ ರೀತಿ ಆರೋಪಿಯು ದಿನಾಂಕ 10.02.2011 ರಂದು ಬೇರೆ ಕಚೇರಿಗೆ ವರ್ಗಾವಣೆಯಾಗಿದ್ದು ಆಗ ರೂ.36,000/-ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಹುಣಸೂರಿನ ಬೈಪಾಸ್ ರಸ್ತೆಯಲ್ಲಿರುವ ಕೆಫೆ ಕೂರ್ಗ ಎನ್.ಕೆ.ಕಾವೇರಪ್ಪರವರ ಆರೋಪಿಯು ಕೆವೈಸಿ ನಿಯಮಗಳನ್ನು ಪಾಲಿಸದೇ ಅವರಿಗೆ ಖಾತೆಯನ್ನು ತೆರೆಯಲು ಸಹಕರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಆರೋಪಿ ದಿನಾಂಕ 23.02.2010 ರಂದು ಕೆಬಿಎಲ್ ಕಾರ್ ಲೋನ್ ಸ್ಕಿಂನಲ್ಲಿ ಸುಜುಕಿ ಸ್ವಿಫ್ಟ ಕಾರ್ ರೂ.8,02,410/-ರ ಖರೀದಿಸಲು ರೂ.6,00,000/-ಗಳ ಕಂತು ಸಾಲವನ್ನು ನೀಡಿದ್ದು ಸಾಲದ ಹಣವನ್ನು ಜಮಾ ಮಾಡಿರುತ್ತಾರೆ. ಹಾಗೂ ಅದೇ ದಿನ ಪ್ರಥಮ ಮೋಟಾರ್ ಬೆಂಗಳೂರು ಇವರಿಗೆ ಸಂದಯವಾಗುವಂತೆ ರೂ.6,12,073 ನ್ನು ಡಿಡಿ ಸಂಖ್ಯೆ 448521 ನ್ನು ನಮ್ಮ ಬ್ಯಾಂಕಿನ ಸರ್ವೀಸ್ ಶಾಖೆಯಲ್ಲಿ ಪಡೆಯುವಂತೆ ನೀಡಿದ್ದು ಅದಕ್ಕೆ ಸಂಬಂಧಪಟ್ಟ ಇನವೈಸ್ ರಶೀದಿ, ಡುಪ್ಲಿಕೇಟ್ ಕೀ ಹಾಗೂ ಕಾರಿನ ಆರ್ಸಿ ಪುಸ್ತಕದ ನಕಲನ್ನು ಸಹ ಬ್ಯಾಕಿಗೆ ಕೊಟ್ಟಿರುವುದಿಲ್ಲ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಂತರ ಈ ಬಗ್ಗೆ ವಿಚಾರ ಮಾಡಿದಾಗ ಕಾವೇರಿ ಅಪ್ಪರವರು ಯಾವುದೇ ರೀತಿ ಮೇಲೆ ಹೇಳಿದ ಸಾಲವನ್ನು ಪಡೆದಿರುವುದಿಲ್ಲ ಎನ್ನುವ ವಿಚಾರ ಗೊತ್ತಾಯಿತು ಎಂದರೆ ಗೊತ್ತಿಲ್ಲ. ದಿನಾಂಕ 23.03.2009 ರಂದು ಡಿವೈ ಉಪ್ಪಾರವರು ಹುಣಸೂರಿನ ಶಾಖೆಯಲ್ಲಿ ಖಾತೆ ನಂ 762541 ನ್ನು ಹೊಂದಿದ್ದು ಸದರಿ ಖಾತೆ ತೆಗೆಯಲು ಆರೋಪಿ ಜಗ್ಗಪ್ಪ ಸ,ನ ಕುಮಾರ ಕುಮಾರ ಗೌಡ ಎನ್ನುವವರನ್ನು ನನಗೆ ಪಡಿಚಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಡಿ ವೈ ಉಪ್ಪಾರರವರು ಅನೇಕ ಸಾಲ ಸೌಲಭ್ಯಗಳನ್ನು ಬ್ಯಾಂಕನಿಂದ ಪಡೆದಿರುತ್ತಾರೆ ಎಂದರೆ ಗೂತ್ತಿಲ್ಲ. ದಿನಾಂಕ 11.08.2010 ರಂದು ರೂ.25,00,000/-ಗಳನ್ನು ಆರೋಪಿಯು ಯೂವುದೇ ಅನುಮತಿ ಇಲ್ಲದೆ ಡೆಬಿಟ್ ಸ್ಲಿಪ ಹಾಗೂ ಆರ್ಟಿಜಿಎಸ್ ಮೂಲಕ

ತಮ್ಮ ಹೆಂಡತಿ ನಡೆಸುತ್ತಿರುವ ಶ್ರಧ್ಧಾ ಎಂಟರಪ್ರೈಸಸ್ ಸಂಸ್ಥೆಯ ಖಾತೆಗೆ ವರ್ಗಾವಣೆ ಮಾಡಿಕೊಂಡು ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ಈ ರೀತಿ ಆರೋಪಿಯು ರಾಜಮ್ಮರವರಿಗೆ ಸಂಬಂಧಪಟ್ಟ ರೂ.57,250/- ವರದರಾಜುರವರ ಬಾಬ್ತು ರೂ.36,000/- ಹಾಗೂ ಉಪ್ಪಾರವರ ಬಾಬ್ತು ರೂ.25,00,000/- ಹೀಗೆ ಒಟ್ಟು ರೂ.25,93,280/-ಗಳನ್ನು ಬ್ಯಾಂಕಗೆ ನಷ್ಟ ಪಡಿಸಿ ತಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.108 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ ಎಲ್ ಕೆ ಅವರಿಂದ-***

**5.** ಘಟನೆ ನಡೆಯುವ **1 ½** ವರ್ಷದಿಂದ ನಾನು ಕೆಲಸದಲ್ಲಿ ಇದ್ದೆ. ನಾನು ಅದೇ ಮೊದಲ ಬಾರಿ ಹುಣಸೂರಿನಲ್ಲಿ ಕ್ಯಾಷಿಯರ್ ಆಗಿದ್ದೆ. ರಾಜಮ್ಮ ಅವರ **55,000/-** ರೂ. ಗೆ ಸಂಬಂಧಪಟ್ಟಂತೆ ವಿತ್ ಡ್ರಾ ಫಾರ್ಮ್ ನಲ್ಲಿ ರಾಜಮ್ಮ ಅವರ ಸಹಿ ಇತ್ತು. ಸಾಮಾನ್ಯವಾಗಿ ಕಸ್ಟಮರ್ ಗೆ ನಾವು ಹಣ ಕೊಡುವ ಮುಂಚೆ ಟೋಕನ್ ಕೊಡುತ್ತೇವೆ ಎಂದರೆ ಸರಿ. ಸದರಿ ವಿತ್ ಡ್ರಾ ಫಾರ್ಮ್ ನಲ್ಲಿ ಟೋಕನ್ ನಂಬರ್ ಬರೆದಿತೆ ಇಲ್ಲವೊ ನನಗೆ ಗೊತ್ತಿಲ್ಲ. ಆ ದಿನ ಸ್ಥಳದಲ್ಲಿ ರಾಜಮ್ಮ ಇದ್ದರೋ ಇಲ್ಲವೊ ನಿಮಗೆ ಗೊತ್ತಿತ್ತಾ ಎಂಬ ಪ್ರಶ್ನೆಗೆ ಆ ದಿನ ಬ್ಯಾಂಕಿನಲ್ಲಿ ತುಂಬಾ ಜನರು ಇದ್ದರು. ಆದ್ದರಿಂದ ನಾನು ಅದನ್ನು ಮ್ಯಾನೇಜರ್ ಗೆ ನೀಡಿರುತ್ತೇನೆ. ಸದರಿ ರಾಜಮ್ಮ ಅವರು ಬಂದು ತನಗೆ ದುಡ್ಡು ಬಂದಿಲ್ಲ ಎಂದು ಯಾವುದೇ ದೂರು ನೀಡಿಲ್ಲ.

6. ಈ ರೀತಿ ಬ್ಯಾಂಕ್ ಮ್ಯಾನೇಜರ್ ತಾವೇ ಹಣ ಪಡೆದುಕೊಳ್ಳುವ ಪದ್ದತಿ ಇದೆ. ಉಪ್ಪಾರ ಅವರ ಆರ್ ಟಿ ಜಿ ಎಸ್ ಮಾಡಬೇಕಾದರೆ ಚೆಕ್ ಪಡೆಯುತ್ತೇವೆ. ಚೆಕ್ ಇಲ್ಲದೆ ಯಾವುದೇ ಕಾರಣಕ್ಕೂ ಬೇರೆಯವರ ಅಕೌಂಟ್ ಗೆ ಆರ್ ಟಿ ಜಿ ಎಸ್ ಮಾಡುವಂತಿಲ್ಲ ಎಂದರೆ ಸರಿ. ಉಪ್ಪಾರ ಅವರ ಆರ್ ಟಿ ಜಿ ಎಸ್ ಫಾರ್ಮ್ ಜೊತೆ ಡೇಬಿಟ್ ಸ್ಲಿಪ್ ಮತ್ತು ಆರ್ ಟಿ ಜಿ ಎಸ್ ಫಾರ್ಮ್ ಇತ್ತು ಅದರಲ್ಲಿ ಚೆಕ್ ನಂಬರ್ ಇತ್ತು. ಸದರಿ ಚೆಕ್ ಬಾರದೆ ಇದ್ದಾಗ ನಾನು ಸುಮಾರು ಬಾರಿ ಮ್ಯಾನೇಜರ್ ಆರೋಪಿಯವರ ಬಳಿ ಕೇಳಿದ್ದೆ. ಈ ರೀತಿ ಚೆಕ್ ಬಂದಿಲ್ಲ ಎಂದು ನಾನು ಮೇಲಾಧಿಕಾರಿಗಳಿಗೆ ದೂರು ನೀಡಿಲ್ಲ.

7. ನಾನು ಬ್ಯಾಂಕಿಗೆ ಬರುವ ಮುಂಚೆ ಟ್ರೈನಿಂಗ್ ಆಗಿದೆ. ನಮ್ಮ ಬ್ಯಾಂಕಿನ ನಿಯಾಮವಳಿಗಳನ್ನು ಯಾರೇ ಮ್ಯಾನೇಜರ್ ಏನೇ ಹೇಳಿದರು ನಾವು ನಿಯಾಮವಳಿ ಬಿಟ್ಟು ಕೆಲಸ ಮಾಡುವಂತಿಲ್ಲ ಎಂದರೆ ಸರಿ. ಚೆಕ್ ಇಲ್ಲದೆ ಬೇರೆಯವರ ಅಕೌಂಟ್ ಆರ್ ಟಿ ಜಿ ಎಸ್ ಮಾಡುವುದು ತಪ್ಪು ಎಂಬ ನಿಯಮ ಇದೆ ಎಂದರೆ ಸರಿ.

8. ಹಣ ಹೋಗಿರುವ ಶ್ರದ್ದಾ ಎಂಟರ್ ಪ್ರೈಸಸ್ ಯಾರಿಗೆ ಸೇರಿದ್ದು ನನಗೆ ಗೊತ್ತಿಲ್ಲ. ಇನ್ಸ್ ಪೆಕ್ಟನ್ ಅವರು ಬಂದು ಹೇಳಿದಾಗ ಅದು ಆರೋಪಿ ಹೆಂಡತಿ ಅಕೌಂಟ್ ಎಂದು ನನಗೆ ತಿಳಿದುಬಂತು. ಶ್ರದ್ದಾ ಎಂಟರ್ ಪ್ರೈಸಸ್ ಆರೋಪಿ ಹೆಂಡತಿಗೆ ಸೇರಿದೆ ಎಂದು ಯಾವುದೇ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸರಿ. ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ, ಆರೋಪಿ ಯಾವುದೇ ಹಣ ಪಡೆದಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ. , ಹುಣಸೂರು.